6	ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಕಚೇರಿ ಅಧೀಕ್ಷಕರ ಹುದ್ದೆಗೆ ಪದೋನ್ನತಿ	3	–
7	ಶೀಘ್ರಲಿಪಿಗಾರರ ಹುದ್ದೆಯಿಂದ ಕಛೇರಿ ಅಧೀಕ್ಷಕರ ಹುದ್ದೆಗೆ ಪದೋನ್ನತಿ	1	1
8	ಬೆರಳಚ್ಚುಗಾರರ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ ಪದೋನ್ನತಿ	1	1
9	ಬೆರಳಚ್ಚುಗಾರರ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ ಪದೋನ್ನತಿ	–	1
10	ಅಬಕಾರಿ ರಕ್ಷಕರ ಹುದ್ದೆಯಿಂದ ಅಬಕಾರಿ ಉಪ ನಿರೀಕ್ಷಕರ ಹುದ್ದೆಗೆ ಪದೋನ್ನತಿ	1	–
11	ವಾಹನ ಚಾಲಕರ ಹುದ್ದೆಯಿಂದ ಅಬಕಾರಿ ಉಪ ನಿರೀಕ್ಷಕರ ಹುದ್ದೆಗೆ ಪದೋನ್ನತಿ	1	1

5232(6025) ಡಾ॥ ಅನ್ನದಾನಿ (ಮಳವಳ್ಳಿ) ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಳವಳ್ಳಿ ಕ್ಷೇತ್ರವ್ಯಾಪ್ತಿಯ ಶಿಂಷಾ ಕಿರುಜಲ ವಿದ್ಯುತ್ ಯೋಜನೆಯ ಈ ವರೆಗಿನ ಪ್ರಗತಿಯ ವಿವರಗಳೇನು.

ಆ) ಈ ಯೋಜನೆ ಪ್ರಾರಂಭದಲ್ಲಿ ಎಷ್ಟು ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಗೆ ಅನುಮತಿಸಲಾಗಿತ್ತು.

ಇ) ಈಗ ಅದನ್ನು ಹೆಚ್ಚಿಸಲಾಗಿರುವುದು ನಿಜವೇ ಹಾಗೂ ನಿಜವಾಗಿದ್ದಲ್ಲಿ ಅದರ ವಿವರಗಳನ್ನು ನೀಡುವುದು;

ಈ) ಇಂಥ ಕಿರುಜಲವಿದ್ಯುತ್ ಯೋಜನೆಗೆ ಮೊದಲು ನಿಗದಿಪಡಿಸಿದ ಸಾಮರ್ಥ್ಯಕಿಂತ ಹೆಚ್ಚು ಸಾಮರ್ಥ್ಯಕ್ಕೆ ಅನುಮತಿಸುವಲ್ಲಿ ಅನುಸರಿಸಬೇಕಾದ ನಿಯಮಗಳೇನು(ಅದನ್ನು ನಿರ್ಧರಿಸಿ ಅನುಮತಿ ನೀಡುವ ಪ್ರಕ್ರಿಯೆಯ ವಿವರಗಳನ್ನು ನೀಡುವುದು)

ಉ) ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ ಅನುಮತಿ ನೀಡಿರುವುದು ಮತ್ತು ಅನುಮತಿ ನೀಡಿಕೆಯಲ್ಲಿ ರೀತಿನೀತಿಗಳನ್ನು ಅನುಸರಿಸದೇ ಇರುವುದನ್ನು ಸರ್ಕಾರ ಗಮನಿಸಿದೆಯೇ ಹಾಗೂ ಗಮನಿಸಿದ್ದಲ್ಲಿ ಈ ಕುರಿತಾದ ಸರ್ಕಾರದ ನಿಲುವುಗಳೇನು ;

ಊ) ಈ ಯೋಜನೆಯಲ್ಲಿ ಹೆಚ್ಚುವರಿ ಸಾಮರ್ಥ್ಯದ ಉತ್ಪಾದನೆಗಾಗಿ ಹೆಚ್ಚುವರಿ ಭೂಮಿ ಇತ್ಯಾದಿಗಳು ಸ್ವಾಧೀನಪಡಿಸಿಕೊಳ್ಳದಿರಲು ಮತ್ತು ಅಲ್ಲಿನ ಜಲಪಾತ ಮತ್ತು ನಯನಮನೋಹರ

ಸೃಷ್ಟಿಸೌಂದರ್ಯದ ಬ್ಲಫ್ ಜಲಾಶಯವನ್ನು ಹಾನಿಗೊಳಗಾಗದಂತೆ ಮಾಡಲು ಸರ್ಕಾರದ ಕ್ರಮಗಳೇನು;

ಋ) ಹಾಗಿದ್ದಲ್ಲಿ ಹಲವಾರು ಸಮಸ್ಯೆಗಳನ್ನು ತಂದೊಡ್ಡಬಹುದಾದ ಈ ಯೋಜನೆಯನ್ನು ಕೈಬಿಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಮಳವಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿ 18.00 ಮೆ.ವ್ಯಾ ಸಾಮರ್ಥ್ಯದ ಶಿಂಷಾ ಕಿರುಜಲ ವಿದ್ಯುತ್ ಯೋಜನೆಯನ್ನು ಮೆ॥ ಅಟ್ರಿಯ ಪವರ್ ಕಾರ್ಪೋರೇಷನ್ ಲಿ., (ಮೆ॥ ಅಸ್ಕ ಬ್ರದರ್ಸ್) ಕಂಪನಿಯವರಿಗೆ ಹಂಚಿಕೆ ಮಾಡಲಾಗಿದ್ದು. ಈ ಯೋಜನೆಯನ್ನು ಅನುಷ್ಟಾನಗೊಳಿಸಲಾಗಿದೆ.

ಆ) ಈ ಯೋಜನೆಯನ್ನು ಪ್ರಾರಂಭದಲ್ಲಿ 6.00 ಮೆ.ವ್ಯಾ ಸಾಮರ್ಥ್ಯಕ್ಕೆ ಹಂಚಿಕೆ ಮಾಡಲಾಗಿತ್ತು.

ಇ) ಹೌದು, ನಿಜ. ಸರ್ಕಾರಿ ಆದೇಶ ಸಂಖ್ಯೆ ಡಿಇ 28 ಎನ್.ಸಿ.ಇ 96(24) ದಿನಾಂಕ 24.7.1996 ರನ್ವಯ ಶಿಂಷಾ ಕಿರುಜಲ ವಿದ್ಯುತ್ ಯೋಜನೆಯನ್ನು ಮೆ॥ ಅಟ್ರಿಯ ಪವರ್ ಕಾರ್ಪೋರೇಷನ್ ಲಿ., (ಮೆ॥ ಆಸ್ಕ ಬ್ರದರ್ಸ್) ಕಂಪನಿಯವರಿಗೆ ಮೊದಲು 6.00 ಮೆ. ವ್ಯಾ ಸಾಮರ್ಥ್ಯಕ್ಕೆ ಹಂಚಿಕೆ ಮಾಡಲಾಗಿತ್ತು. ನಂತರ ಆದೇಶ ಸಂಖ್ಯೆ ಡಿಇ 33 ಎನ್.ಸಿ.ಇ 97 ದಿನಾಂಕ 31.10.1997 ರನ್ವಯ ಸಾಮರ್ಥ್ಯವನ್ನು 12.00 ಮೆ.ವ್ಯಾಗೆ ಹೆಚ್ಚಿಸಲಾಗಿದ್ದು. ನಂತರ ಸಾಮರ್ಥ್ಯವನ್ನು ಆದೇಶ ಸಂಖ್ಯೆ ಇಂಇ 90 ಎಸ್.ಸಿ.ಇ 2002 ದಿನಾಂಕ 18.7.2003 ರನ್ವಯ 18.00 ಮೆ.ವ್ಯಾಗೆ ಹೆಚ್ಚಿಸಲಾಗಿದೆ.

ಈ) ಅಭಿವೃದ್ದಿದಾರರು ಹಂಚಿಕೆಗಾಗಿ ನೀಡುವ ಸಂಭವನೀಯ ವರದಿಯ (ಪಿ.ಎಫ್.ಆರ್) ಆಧಾರದ ಮೇಲೆ ಈ ಯೋಜನೆಯನ್ನು ಹಂಚಿಕೆ ಮಾಡಲಾಗುವುದು. ಹಂಚಿಕೆಯಾದ ಮೇಲೆ ಅಭಿವೃದ್ಧಿದಾರರು ಈ ಯೋಜನೆಯನ್ನು ವಿವರವಾಗಿ ಅಭ್ಯಸಿಸಿ, ಖಚಿತವಾದ ನೀರಿನ ಹರಿವುಗಳ ವಿವರವನ್ನು ಲಭ್ಯವಾಗುವ ಎತ್ತರದ ಬಗ್ಗೆ. ಮಾಹಿತಿಗಳನ್ನು ಒಳಗೊಂಡಂತೆ ವಿವರವಾದ ಯೋಜನಾ ವರದಿ (ಡಿ.ಪಿ.ಆರ್)ನ್ನು ಸಿದ್ದಪಡಿಸುವರು. ಈ ಸಂದರ್ಭದಲ್ಲಿ ಹೆಚ್ಚಿನ ಸಾಮರ್ಥ್ಯದ ವಿದ್ಯುತ್ ಉತ್ಪಾದನೆಗೆ ಅವಕಾಶವಿದ್ದಲ್ಲಿ ಅಭಿವೃದ್ಧಿಗಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮತಕ್ಕೆ ಸಾಮರ್ಥ್ಯ ಹೆಚ್ಚಳಕ್ಕೆ ಕೋರುವರು. ಈ ಸಂಸ್ಥೆಯು ಡಿ.ಪಿ.ಆರ್‌ನಲ್ಲಿರುವ ತಾಂತ್ರಿಕ ಅಂಶಗಳನ್ನು ಸೂಕ್ತವಾಗಿ ಪರಿಶೀಲಿಸಿ ಹಾಗೂ ಸ್ಥಳ ಪರಿವೀಕ್ಷಣೆ ಮಾಡಿ, ಸರ್ಕಾರಕ್ಕೆ ವರದಿಯೊಂದಿಗೆ ಶೀಫಾರಸ್ಸನ್ನು ಕಳುಹಿಸಿಕೊಡುತ್ತದೆ. ಸರ್ಕಾರವು ಕ್ರೆಡತ ಸಂಸ್ಥೆಯ ವರದಿಯನ್ನಾಧರಿಸಿ, ಅಭಿವೃದ್ದಿದಾರರು ಸಿದ್ದಪಡಿಸಿದ ಡಿ.ಪಿ.ಆರ್‌ಗೆ ಸಂಬಂಧಿತ ಇಲಾಖೆಗಳಾದ ನೀರಾವರಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ಕೆ.ಪಿ.ಟಿ.ಸಿ.ಎಲ್, ಕೆ.ಪಿ.ಸಿ.ಎಲ್‌ಗಳಿಂದ ಅನುಮೋದನೆ ಪಡೆದ ನಂತರ ಕೊನೆಯದಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ದಿಂದ ತಾಂತ್ರಿಕ ಅನುಮೋದನೆ ಪಡೆಯಬೇಕು ಎಂಬ ಷರತ್ತುಗಳೊಂದಿಗೆ ಸಾಮರ್ಥ್ಯ ಹೆಚ್ಚಿಸಿ ಆದೇಶ ನೀಡುತ್ತದೆ. ಅಭಿವೃದ್ಧಿದಾರರು ಆದೇಶದಲ್ಲಿ

ತಿಳಿಸಿರುವ ಷರತ್ತುಗಳಂತೆ ವಿವಿಧ ಸಂಬಂಧಿತ ಇಲಾಖೆಗಳಿಂದ ಅನುಮೋದನೆಗಳನ್ನು ಪಡೆದು ಅಂತಿಮವಾಗಿ ಕ್ರೆಡಲ್ ಸಂಸ್ಥೆಗೆ ತಾಂತ್ರಿಕ ಅನುಮೋದನೆಗಾಗಿ ಕೋರುವರು. ಈ ಯೋಜನೆಗಳ ತಾಂತ್ರಿಕ ಅಂಶವನ್ನು ಕೂಲಂಕಷವಾಗಿ ಪರಿಶೀಲಿಸಿ ತಾಂತ್ರಿಕ ಅನುಮೋದನೆಯನ್ನು ನೀಡುವರು.

ಊ) ಈ ಯೋಜನೆಯ ಸಾಮರ್ಥ್ಯದ ಹೆಚ್ಚಳಕ್ಕೆ ಹೆಚ್ಚಿನ ನೀರಿನ ಹರಿವು ಅಭ್ಯವಿರುವುದನ್ನು ಸೂಕ್ತವಾಗಿ ಪರಿಶೀಲಿಸಿ ಸರ್ಕಾರವು ಅನುಮತಿ ನೀಡುತ್ತದೆ. ಅದೂ ಅಲ್ಲದೇ ಇದಕ್ಕೆ ನೀರಾವರಿ ಇಲಾಖೆಯ ಅನುಮತಿಯನ್ನು ಸಹ ಅಭಿವೃದ್ದಿದಾರರು ಪಡೆಯಬೇಕಾಗಿರುತ್ತದೆ.

ಋ) ಶಿಂಷಾ ಕಿರುಜಲ ವಿದ್ಯುತ್ ಯೋಜನೆಯ ಸಾಮರ್ಥ್ಯ ವಿಸ್ತರಣೆಗೆ ಹೆಚ್ಚುವರಿ ಭೂಮಿಯ ಅವಶ್ಯಕತೆ ಇರದಿರುವುದರಿಂದ ಹೆಚ್ಚಿನ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ. ಈ ಯೋಜನೆಯು ಈ ಪ್ರಶ್ನೆಯಲ್ಲಿ ತಿಳಿಸಿರುವಂತೆ ಬ್ಲಫ್ ಜಲಾಶದ ವ್ಯಾಪ್ತಿಯಲ್ಲಿ ಇರುವುದಿಲ್ಲದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

5233(5799) ಶ್ರೀ ಅಪ್ಪಸಾಹೇಬ್ (ಅಪ್ಪ) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಲ್ಪಸಂಖ್ಯಾತರ ಅಭಿವೃದ್ದಿಗಾಗಿ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮದ ವತಿಯಿಂದ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳು ಯಾವುವು ;

ಆ) ವಿಜಾಪುರ ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಮಂಜೂರಾದ ಮತ್ತು ಬಿಡುಗಡೆಯಾದ ಹಣವೆಷ್ಟು;

ಇ) ಈ ಹಣದಿಂದ ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು ?

ಶ್ರೀ ಜಬ್ಬರ್‌ಖಾನ್ ಹೊನ್ನಾಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು) :

ಅ) ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮದಿಂದ ಅಲ್ಪ ಸಂಖ್ಯಾತರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಸ್ವಾವಲಂಬನ ಮಾರ್ಜಿನ ಹಣ ಸಾಲದ ಯೋಜನೆ.
2. ಸಹಾಯಧನ ಯೋಜನೆ.
3. ನೇರ ಸಾಲದ ಯೋಜನೆ.
4. ತರಬೇತಿ ಕಾರ್ಯಕ್ರಮಗಳು.
5. ಗಂಗಾ ಕಲ್ಯಾಣ ಯೋಜನೆ.